ನಿಮ್ಮೊಡನೆ

# ಎಲ್ಲರ ಕೈಗೂ ಮೊಬೈಲ್ ಕೊಡಬಲ್ಲೆವಾದರೆ ಎಲ್ಲ ಮಕ್ಕಳನ್ನೂ ಶಾಲೆಗೆ ಕರೆತರಲಾರೆವೇಕೆ?

**ಪ್ರತಿಯೊಬ್ಬರ ಕೈಗೆ ಮೊಬೈಲ್ ಕೊಡಲು ಸಾಧ್ಯವಾಗಿರುವ ವ್ಯವಸ್ಥೆಯಲ್ಲಿ ಎಲ್ಲ ಮಕ್ಕಳನ್ನು ಶಾಲೆಗೆ ಕರೆತರುವುದು ಹಾಗೂ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸಾಧ್ಯವಾಗಿಲ್ಲ.**

ಸರ್ಕಾರಿ ಶಾಲೆಗಳ ದುಃಸ್ಥಿತಿ ಗಮನಿಸಿದರೆ ಆತ್ಮಸಾಕ್ಷಿಗೆ ಆಘಾತವಾಗುತ್ತದೆ ಎಂದು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ. ರಾಜ್ಯದ ಕೆಲವು ಸರ್ಕಾರಿ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯಗಳು ಇಲ್ಲದಿರುವುದನ್ನು ಪ್ರಸ್ತಾಪಿಸಿರುವ ನ್ಯಾಯಪೀಠ, ಇಂತಹ ಶಾಲೆಗಳಿಂದ ಯಾವ ರೀತಿಯ ಸಮಾಜದ ನಿರ್ಮಾಣ ಸಾಧ್ಯ ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದೆ. ನ್ಯಾಯಪೀಠದ ಟೀಕೆ–ಟಿಪ್ಪಣಿ ಹಾಗೂ ಕಳವಳ ಯಾರ ಆತ್ಮಸಾಕ್ಷಿಯನ್ನಾದರೂ ಕಲಕಿ ಶಾಲೆಗಳ ಪರಿಸ್ಥಿತಿ ಸುಧಾರಿಸಲು ಪ್ರೇರಣೆಯಾಗಬಹುದೆ? ಶಾಲಾ ಮಕ್ಕಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸದಿರುವ ಸರ್ಕಾರವನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿರುವುದು ಇದು ಮೊದಲೇನಲ್ಲ. ಆದರೆ, ವರ್ಷದಿಂದ ವರ್ಷಕ್ಕೆ ಸರ್ಕಾರಿ ಶಾಲೆಗಳ ಸ್ಥಿತಿಗತಿ ದುರ್ಬಲಗೊಳ್ಳುತ್ತಲೇ ಇರುವುದನ್ನು ಗಮನಿಸಿದರೆ, ಶಿಕ್ಷಣ ಕ್ಷೇತ್ರದಲ್ಲಿ ಆಶಾದಾಯಕ ಬದಲಾವಣೆಯನ್ನೇನೂ ನಿರೀಕ್ಷಿಸುವಂತಿಲ್ಲ. ಅಷ್ಟರಮಟ್ಟಿಗೆ ನಮ್ಮ ರಾಜಕಾರಣ ಹಾಗೂ ಸಾಮಾಜಿಕ ಸಂದರ್ಭ ಸಂವೇದನಾಶೂನ್ಯವಾಗಿದೆ. ಆತ್ಮಸಾಕ್ಷಿ ನಷ್ಟಗೊಂಡ ಸಂದರ್ಭ ಇಂದಿನದಾಗಿದೆ. ಇಲ್ಲಿ ಮಾತಷ್ಟೇ ಸೋತಿಲ್ಲ. ಸೌಹಾರ್ದವಷ್ಟೇ ಮಣ್ಣುಗೂಡಿಲ್ಲ. ಆತ್ಮಸಾಕ್ಷಿಯೂ ಸೋತಿದೆ.

ಪ್ರಾಥಮಿಕ ಶಿಕ್ಷಣ ಕ್ಷೇತ್ರದ ಬಗೆಗಿನ ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯವನ್ನು ಸರ್ಕಾರಿ ಶಾಲೆಗಳ ದುಃಸ್ಥಿತಿ ಸೂಚಿಸುವಂತಿದೆ. ಶಾಲಾ ಶಿಕ್ಷಣ ದುರ್ಬಲಗೊಳ್ಳುವುದಕ್ಕೂ ಮಾನಸಿಕವಾಗಿ ಅಪೌಷ್ಟಿಕ ತಲೆಮಾರುಗಳು ರೂಪುಗೊಳ್ಳುವುದಕ್ಕೂ ಇರುವ ಸಂಬಂಧದ ಅರಿವು ಅಧಿಕಾರ ನಡೆಸುವ ರಾಜಕಾರಣಿಗಳಿಗಿದ್ದಂತಿಲ್ಲ. ವೈಯಕ್ತಿಕ ಲಾಭವಿಲ್ಲದ ಯಾವ ಕೆಲಸವೂ ರಾಜಕಾರಣಿಗಳ ಕಣ್ಣಿಗೆ ‘ಅಭಿವೃದ್ಧಿ’ಯೆಂದು ಕಾಣಿಸದಿರುವುದರಿಂದ, ಪ್ರಾಥಮಿಕ ಶಿಕ್ಷಣ ಕ್ಷೇತ್ರ ಶಿಥಿಲಗೊಳ್ಳುತ್ತಿದೆ. ಮಕ್ಕಳ ಕೊರತೆಯ ನೆಪದಲ್ಲಿ ಶಾಲೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆ ವಾರ್ಷಿಕ ಸಂಪ್ರದಾಯ ಎನ್ನುವಂತಾಗಿದೆ; ಆ ಮೂಲಕ ವರ್ಷದಿಂದ ವರ್ಷಕ್ಕೆ ಸರ್ಕಾರಿ ಶಾಲೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಸರ್ಕಾರಿ ಶಾಲೆಗಳು ದುರ್ಬಲಗೊಂಡಷ್ಟೂ ಖಾಸಗಿ ಶಾಲೆಗಳಿಗೆ ಲಾಭವಾಗುವುದರಿಂದ, ರಾಜಕಾರಣಿಗಳು ಮತ್ತು ಅಧಿಕಾರಿಗಳು ‘ಲಾಭದ ಮಾರ್ಗ’ವನ್ನೇ ಆರಿಸಿಕೊಳ್ಳುತ್ತಿದ್ದಾರೆ. ಹೆದ್ದಾರಿಗಳನ್ನು ಅಭಿವೃದ್ಧಿಯ ಪ್ರತೀಕವಾಗಿ ಬಿಂಬಿಸುವ ರಾಜಕಾರಣಿಗಳಿಗೆ, ಶಾಲೆಗಳ ದುರ್ಗತಿ ಕಣ್ಣಿಗೆ ಬೀಳುವುದಿಲ್ಲ. ಊರೊಂದರ ನೈಜ ಅಭಿವೃದ್ಧಿಯನ್ನು ಅಲ್ಲಿನ ಶಾಲೆಯ ಸ್ಥಿತಿಗತಿ ಸೂಚಿಸಬಲ್ಲುದೇ ಹೊರತು ರಸ್ತೆಯಲ್ಲ ಎನ್ನುವ ತಿಳಿವಳಿಕೆಯೂ ವ್ಯವಸ್ಥೆಗಿಲ್ಲ. ‘ವಿವೇಕ’ದ ಹೆಸರಿನ ಕೋಣೆಗಳನ್ನು ನಿರ್ಮಿಸಲು ನಮ್ಮ ಸರ್ಕಾರಿ ವ್ಯವಸ್ಥೆ ಯೋಚಿಸುತ್ತದೆ. ಮಕ್ಕಳಿಗೆ ಶೌಚಾಲಯಗಳನ್ನು ನಿರ್ಮಿಸಿಕೊಡಬೇಕೆನ್ನುವ ವಿವೇಕ ಮಾತ್ರ ಯಾರಲ್ಲೂ ಕಾಣಿಸುವುದಿಲ್ಲ.

ಹೊಸ ಶೈಕ್ಷಣಿಕ ವರ್ಷಾರಂಭದ ಸಂದರ್ಭದಲ್ಲಿ ಮಕ್ಕಳ ಶಾಲಾ ಬ್ಯಾಗ್ ತೂಕದ ಬಗ್ಗೆ ಮತ್ತೊಮ್ಮೆ ಕಾಳಜಿ ವ್ಯಕ್ತವಾಗಿದೆ. ಎಳೆಯ ಬೆನ್ನುಗಳ ಮೇಲಿನ ಬ್ಯಾಗ್‌ಗಳನ್ನು ಗಮನಿಸಿದರೆ, ತೂಕ ಹೊರುವುದರ ತರಬೇತಿ ಪಡೆಯಲು ಪೋಷಕರು ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳಿಸುತ್ತಿದ್ದಾರೆಂದು ಭಾವಿಸಬೇಕಾಗುತ್ತದೆ. ಮಕ್ಕಳನ್ನು ಗೂನುಗೊಳಿಸುವ ಅಮಾನವೀಯ ಹಾಗೂ ಅವೈಜ್ಞಾನಿಕ ಅಭ್ಯಾಸವನ್ನು ಕೊನೆಗೊಳಿಸುವುದು ಅಗತ್ಯ. ಈ ನಿಟ್ಟಿನಲ್ಲಿ ಸ್ಕೂಲ್ ಬ್ಯಾಗ್‌ಗಳ ‘ಹೊರೆ’ಗೆ ಕಡಿವಾಣ ಸ್ವಾಗತಾರ್ಹ. ಆದರೆ, ಸ್ಕೂಲ್ ಬ್ಯಾಗ್ ತೂಕದ ಸಮಸ್ಯೆ ಸಾಮಾನ್ಯವಾಗಿ ಖಾಸಗಿ ಶಾಲೆಗಳಿಗೆ ಸಂಬಂಧಿಸಿದ್ದು. ಸರ್ಕಾರಿ ಶಾಲೆಗಳ ಮಕ್ಕಳಿಗೆ ಸಂಬಂಧಿಸಿದ ಹೊರೆಗಳು ಮೂಲಭೂತ ಅಗತ್ಯಗಳಿಗೆ ಸಂಬಂಧಿಸಿದವು. ಕುಡಿಯುವ ನೀರು, ಶೌಚಾಲಯ, ಸುರಕ್ಷಿತ ಕಟ್ಟಡ, ಪಠ್ಯಪುಸ್ತಕ, ಸಮವಸ್ತ್ರ, ಶಿಕ್ಷಕರ ಲಭ್ಯತೆ – ಸರ್ಕಾರಿ ಶಾಲೆಯಲ್ಲಿ ಪ್ರತಿಯೊಂದೂ ದುಬಾರಿ ನಿರೀಕ್ಷೆಯೇ. ಈ ಸಮಸ್ಯೆಗಳನ್ನು ಬಗೆಹರಿಸುವ ಸಂಕಲ್ಪಶಕ್ತಿಯನ್ನು ಇದುವರೆಗೆ ಯಾವ ಸರ್ಕಾರವೂ ಪ್ರದರ್ಶಿಸಿಲ್ಲ. ಅಧಿಕಾರದಲ್ಲಿ ಇರುವವರ ನೀತಿಗಳು, ಸರ್ಕಾರಿ ಶಾಲೆಗಳ ಮಕ್ಕಳನ್ನು ಖಾಸಗಿ ಶಾಲೆಗಳತ್ತ ಮುಖ ಮಾಡಲು ಪ್ರೇರೇಪಿಸಿರುವುದೇ ಹೆಚ್ಚು. ಬೆನ್ನುಮೂಳೆ ದುರ್ಬಲಗೊಂಡ ಶಾಲೆಗಳಲ್ಲಿ ಮಕ್ಕಳು ಕಲಿಯುವುದು ತಮ್ಮ ಹಣೆಬರಹ ಎಂದು ಹೆಚ್ಚಿನ ಸಂಖ್ಯೆಯ ಪಾಲಕರು ಭಾವಿಸಿದ್ದಾರೆಯೇ ಹೊರತು, ಒಳ್ಳೆಯ ಶಾಲೆಯನ್ನು ಹೊಂದುವುದು ತಮ್ಮ ಹಕ್ಕು ಹಾಗೂ ಆ ಶಾಲೆಯನ್ನು ರೂಪಿಸಬೇಕಾದುದು ಜನ ಪ್ರತಿನಿಧಿಗಳ ಕರ್ತವ್ಯ ಎಂದು ತಿಳಿದಂತಿಲ್ಲ.

ಪ್ರತಿಯೊಬ್ಬರ ಕೈಗೆ ಮೊಬೈಲ್ ಕೊಡಲು ಸಾಧ್ಯವಾಗಿರುವ ವ್ಯವಸ್ಥೆಯಲ್ಲಿ ಎಲ್ಲ ಮಕ್ಕಳನ್ನು ಶಾಲೆಗೆ ಕರೆತರುವುದು ಸಾಧ್ಯವಾಗದಿರುವುದು ಹಾಗೂ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಲ್ಲಿ ವಿಫಲವಾಗಿರುವುದು ಸೂಚಿಸುವುದು ಏನನ್ನು – ಸರ್ಕಾರಿ ವ್ಯವಸ್ಥೆಯ ವೈಫಲ್ಯವನ್ನೋ? ಸಮಾಜದ ಸೋಲನ್ನೋ?

■ **ರಘುನಾಥ ಚ.ಹ.**



ಈಶ್ವರ್